ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈ ಒಂದು ಬೋಗಸ್ ಕಂಪನಿ ಜೊತೆಗೆ ನೇರವಾಗಿ ಅರಣ್ಯ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಶಾಮೀಲಾಗಿದ್ದಾರೆ. ತಾವು ಏನಾದರೂ ತನಿಖೆ ಮಾಡುವುದಿದ್ದರೆ ಯಾವುದಾದರೂ ಇಂಡಿಪೆಂಡೆಂಟ್ ಸಂಸ್ಥೆಯಿಂದ ತನಿಖೆ ಮಾಡಿಸಬೇಕು. ತಮ್ಮ ಇಲಾಖಾವತಿಯಿಂದ ಏನಾದರೂ ತನಿಖೆ ಮಾಡಿದರೆ ಈ ಸತ್ಯ ಹೊರಗೆ ಬರುವುದಿಲ್ಲ. ಅವರೇ ನೇರವಾಗಿ ಶಾಮೀಲಾಗಿದ್ದಾರೆ. ಮತ್ತು ಅವರ ಮುಖಾಂತರವೇ ಇವತ್ತು ರೈತರಿಗೆ ಕಿರುಕುಳ ಕೊಡುವಂತಹ ವ್ಯವಸ್ಥೆ ಆಗುತ್ತಿದೆ. ಅವರು ಇವತ್ತು ಹೇಳುವುದು ಕೇಳಿದರೆ ಆಲ್ ಬಾಣೆ ಲ್ಯಾಂಡ್ ಇನ್ ಕೂರ್ಗ್ ಅರ್ ಫಾರೆಸ್ಟ್ ಅಂತೆ. ಹಾಗಾದರೆ ನಾವು ಏನು ಮಾಡಬೇಕು? ಈ ಪ್ರಶ್ನೆ ಇವತ್ತು ಉದ್ಭವವಾಗುತ್ತದೆ.

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ, ನೇರವಾಗಿ ಪ್ರಶ್ನೆ ಕೇಳಿ ಅಂದರೆ ಏನೆನೋ ಮಾತನಾಡುತ್ತಿದ್ದೀರಿ.

ಶ್ರೀ ಸಿ. ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಫಾರೆಸ್ಟ್ ಇಲಾಖೆಯಲ್ಲಿ ಪೊಲೀಸ್ ಇಲಾಖೆ ಸಹ ಇದೆ. ಅವರ ಮುಖಾಂತರ ವಿಚಾರಣೆಯನ್ನು ಮಾಡಿಸುತ್ತೇನೆ. ಮಾನ್ಯ ಸದಸ್ಯರ ಪ್ರಕಾರ ಅದು ಡೂಪ್ಲಿಕೇಟ್ ಅಂತ ಗೊತ್ತಾದರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸುತ್ತೇನೆ.

ಅತಿವೃಷ್ಟಿ–ಪ್ರಕೃತಿ ವಿಕೋಪಕ್ಕೆ ಬಿಡುಗಡೆಯಾಗಿರುವ ಹಣ.

75(347) ಶ್ರೀ ಬಿ. ಶಿವರಾಂ (ಗಂಡಸಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಕೃತಿ ವಿಕೋಪದಡಿ 2005–06ನೇ ಸಾಲಿನಲ್ಲಿ ಹಾಸನ ಜಿಲ್ಲೆಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು

ಆ) ಬೆಳೆಹಾನಿ ಮತ್ತು ಕಾಮಗಾರಿಗೆ ಮಂಜೂರಾತಿಯಾಗಿರುವ ಮೊತ್ತ ಕ್ಷೇತ್ರವಾರು ಎಷ್ಟೆಷ್ಟು?

ಇ) ಪ್ರಕೃತಿ ವಿಕೋಪದಡಿ ಬೆಳೆಹಾನಿಯ ಅಂದಾಜು ಮತ್ತು ರೈತರಿಗೆ ಕೊಟ್ಟಿರುವ ಮೊತ್ತ ಹಾಗೂ ಬಾಕಿ ಕೊಡಬೇಕಾಗಿರುವ ಮೊತ್ತವೆಷ್ಟು?

ಈ) ಪ್ರಕೃತಿ ವಿಕೋಪದಡಿ ನಷ್ಟವಾಗಿರುವ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಪಡೆದಿರುವ ಪಟ್ಟಿ ಹಾಗೂ ಹಣ ಬಿಡುಗಡೆ ಮಾಡಿರುವ ಮೊತ್ತವೆಷ್ಟು? (ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು):

ಅ) ಪ್ರಕೃತಿ ವಿಕೋಪದಡಿ 2005–06ನೇ ಸಾಲಿನಲ್ಲಿ ಹಾಸನ ಜಿಲ್ಲೆಗೆ ಒಟ್ಟು 2248.55 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆ)	(ಲಕ್ಷಗಳಲ್ಲಿ)	ಬೆಳೆನಷ್ಟ	ಕಾಮಗಾರಿ
	1) ಆಲೂರು	80.44	47.05
	2) ಅರಕಲಗೂಡು	133.05	147.52

3) ಅರಸೀಕೆರೆ	23.84	123.02
4) ಬೇಲೂರು	110.01	167.15
5) ಚನ್ನರಾಯಪಟ್ಟಣ	11.96	78.23
6) ಹೊಳೆನರಸೀಪುರ	150.34	359.56
7) ಹಾಸನ	238.36	182.90
8) ಸಕಲೇಶಪುರ	72.84	84.80
ಒಟ್ಟು	820.84	1191.23

ಇ) ಬೆಳೆಹಾನಿಯ ಅಂದಾಜು 1969.04 ಲಕ್ಷ
ರೈತರಿಗೆ ನೀಡಿದ ಮೊತ್ತ 820.84 ಲಕ್ಷ
ಕೊಡಬೇಕಾಗಿರುವ ಮೊತ್ತ 1148.20 ಲಕ್ಷ

ಈ)

ಕ್ಷೇತ್ರ	ಕಾಮಗಾರಿಗಳ ಸಂಖ್ಯೆ	ಅನುಮೋದನೆ ಮೊತ್ತ	ಬಿಡುಗಡೆ ಮೊತ್ತ
ಆಲೂರು	174	47.05	47.05
ಅರಕಲಗೂಡು	153	147.52	147.52
ಅರಸೀಕೆರೆ	220	139.95	123.02
ಬೇಲೂರು	317	211.43	167.15
ಚನ್ನರಾಯಪಟ್ಟಣ	132	78.23	78.23
ಹೊಳೆನರಸೀಪುರ	496	517.25	359.56
ಹಾಸನ	296	330.25	182.90
ಸಕಲೇಶಪುರ	130	98.01	85.80
ಒಟ್ಟು	1918	1569.69	1191.23

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ, ಈಗಾಗಲೇ ಇಪ್ಪತ್ತೆರಡೂವರೆ ಕೋಟಿ ರೂಪಾಯಿಗಳನ್ನು ಅತಿವೃಷ್ಟಿಗೆ ವಿಶೇಷವಾಗಿ 2005–06ಕ್ಕೆ ಬಿಡುಗಡೆಯಾಗಿದೆ. ಆದರೆ ನಾನು ತಿಳಿಸಿದ್ದೇನೆ, ಈ ಬಿಡುಗಡೆಯಾದಂತಹ ಹಣವನ್ನು ಅದ್ಯತೆ ಮೇಲೆ ಜನ, ಜಾನುವಾರು, ಮನೆ ಬೆಳೆ ಹಾನಿಗೆ ಬಿಡುಗಡೆಯಾಗಬೇಕು ಅಂತ ಹೇಳಿ ಸರ್ಕಾರದ ಸುತ್ತೋಲೆ ಇದೆ. ಆದರೆ ಇವತ್ತು ತಾವು ಒದಗಿಸಿರುವ ಮಾಹಿತಿ ಪ್ರಕಾರ ಬೆಳೆ ಹಾನಿ ಏನಾಗಿದೆ ಅದಕ್ಕೆ ಕೇವಲ 40 ಪರ್ಸೆಂಟ್ ಮಾತ್ರ ಇದುವರೆಗೂ ಬಿಡುಗಡೆಯಾಗಿದೆ.

ಆದರೆ ಕಾಮಗಾರಿಕೆ 80 ಪರ್ಸೆಂಟ್ ಬಿಡುಗಡೆ ಆಗಿದೆ. ಇದು ಎಷ್ಟರ ಮಟ್ಟಿಗೆ ಸಮಂಜಸ ಎಂಬುದು ಒಂದು. ಎರಡನೆಯದು, ಈಗಾಗಲೇ ಕಾಮಗಾರಿಗೆ ಅನುಮೋದನೆ ಅಂದರೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿರುವುದು 1569 ಲಕ್ಷಕ್ಕೆ, ಬಿಡುಗಡೆಯಾಗಿರುವುದು 1193 ಲಕ್ಷ, ರೂ ಉಳಿದಂತಹ ಕಾಮಗಾರಿಗೆ ತಾವು ನಿರ್ದಿಷ್ಟವಾಗಿ ಎಷ್ಟು ದಿವಸದಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಾ? ವಿಶೇಷವಾಗಿ ಬೆಳೆಹಾನಿಗೆ ಒಂದು ಗ್ರಾಮದಲ್ಲಿ ಸಾಧಾರಣ 100 ರೈತರಲ್ಲಿ ಕೆಲವರಿಗೆ ಮಾತ್ರ ಕೊಟ್ಟರೆ ಸರಿಯೇ?

ಹಾಸನ ತಾಲ್ಲೂಕಿನಲ್ಲಿ ಆಲೂಗಡ್ಡೆಯಲ್ಲಿ ಪರಿಪೂರ್ಣವಾಗಿ ನಷ್ಟವಾಗಿದೆ ಎಂದು ಅಧಿಕಾರಿಗಳು ಅಂದಾಜು ಮಾಡಿ 40 ರೈತರಿಗೆ ಪರಿಹಾರ ಕೊಟ್ಟು ಉಳಿದ 60 ರೈತರಿಗೆ ಕೊಡದೇ ಇದ್ದಾಗ ಅವರು ಯಾವ ರೀತಿಯ ಭಾವನೆ ಹೊಂದುತ್ತಾರೆ ಎಂಬುದನ್ನು ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ತಾವೇನು ಕ್ರಮ ಜರುಗಿಸುವಿರಿ ಎಂದು ನಿರ್ದಿಷ್ಟ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೆ ಹಾಸನ ಜಿಲ್ಲೆಗೆ ಸಂಬಂಧಿಸಿ 2005–06ರಲ್ಲಿ ಪ್ರಕೃತಿ ವಿಕೋಪದಡಿ ಬಿಡುಗಡೆಯಾದ ಹಣವೆಷ್ಟು ಎಂದು ತಾಲ್ಲೂಕುವಾರು ಮಾಹಿತಿಯನ್ನು ಕೇಳಿದ್ದಾರೆ. 2005–06ರಲ್ಲಿ ಹಾಸನ ಜಿಲ್ಲೆಗೆ ಒಟ್ಟು 24,48,55,000 ರೂ.ಗಳನ್ನು ಬಿಡುಗಡೆಗೊಳಿಸಲಾಗಿದೆ. ಆಲೂರು, ಅರಸಿಕೆರೆ, ಅರಕಲಗೂಡು ಮುಂತಾದ ತಾಲ್ಲೂಕುವಾರು ವಿವರವನ್ನೂ ಒದಗಿಸಲಾಗಿದೆ. ಒಟ್ಟು ಬೆಳೆಹಾನಿ 19 ಕೋಟಿ, ರೂ. ರೈತರಿಗೆ ನೀಡಿದ್ದು 8.20 ಕೋಟಿ ರೂ. ಬೆಳೆ ನಷ್ಟಕ್ಕೂ ಪರಿಹಾರ ಇದರಲ್ಲಿ ಕೊಡಲಾಗಿದೆ. ಕಾಮಗಾರಿಗಳಿಗೂ ಹಣ ಬಿಡುಗಡೆಗೊಳಿಸಲಾಗಿದೆ. ಮಾನ್ಯ ಶಿವರಾಂರವರು ಹೇಳುವುದು, ಬೆಳೆ ನಷ್ಟಕ್ಕೆ ಹೆಚ್ಚಿನ ಹಣ ಬಿಡುಗಡೆಯಾಗಬೇಕಾಗಿತ್ತು ಕಾಮಗಾರಿಗಳದ್ದು ನಂತರ ತೆಗೆದುಕೊಳ್ಳಬೇಕಾಗಿತ್ತು ಎಂದು. ಯಾವುದೇ ಜಿಲ್ಲೆಯಲ್ಲಿ ಆ ಜಿಲ್ಲಾಧಿಕಾರಿ ಏನು ವರದಿ ಕೊಡುತ್ತಾರೆ ಅದರನ್ವಯ ಸರ್ಕಾರದಲ್ಲಿ ಹೈಪವರ್ ಕಮಿಟಿ ಅಧಿಕಾರಿಗಳು ಒಂದು ನಿರ್ಣಯ ಮಾಡಿ ಅದರ ಪ್ರಕಾರ ಪ್ರತಿಯೊಂದು ಜಿಲ್ಲೆಗೆ ಹಣ ಬಿಡುಗಡೆ ಮಾಡಲಾಗುವುದು. ಅದರಂತೆ 22 ಕೋಟಿ ರೂ. ಹಣ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಏನು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಬೆಳೆನಷ್ಟದ್ದು, ತೆಗೆದುಕೊಳ್ಳಬೇಕು ಎಂಬುದೆಲ್ಲಾ ಜಿಲ್ಲಾಧಿಕಾರಿಗಳು ನಿರ್ಣಯ ಮಾಡಬೇಕಾದ್ದು, ಅಲ್ಲಿನ ತುರ್ತು ಸನ್ನಿವೇಶ ನೋಡಿಕೊಂಡು ಅವರು ತಾಲ್ಲೂಕುವಾರು ಈ ಹಣವನ್ನು ವಿತರಣೆ ಮಾಡಿರುತ್ತಾರೆ. ಜೊತೆಗೆ ಬೆಳೆ ನಷ್ಟಕ್ಕೆ ಇನ್ನೂ ಪರಿಹಾರ ಕೊಡಬೇಕು ಎಂದು ಸದಸ್ಯರು ಏನು ಮನವಿ ಮಾಡಿದ್ದಾರೆ, ಅದರ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಶ್ರೀ ಬಿ. ಶಿವರಾಂ: ತಾವು ಈಗಾಗಲೇ ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಿದ್ದೀರಿ. ಗ್ರಾಮದಲ್ಲಿ ಅಥವಾ ಒಂದು ತಾಲ್ಲೂಕಿನಲ್ಲಿ 20 ಹಳ್ಳಿಗೆ ಕೊಟ್ಟು ಆ ಹಳ್ಳಿಯಲ್ಲೂ ಭಾಗಶಃ ಕೊಟ್ಟು ಉಳಿದ ರೈತರು ಯಾವ ರೀತಿ ಆತಂಕದಲ್ಲಿರುತ್ತಾರೆ. ಆ ಆತಂಕ ನಿವಾರಿಸಲು ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ನಾನು ಕಾಮಗಾರಿ ಕೇಳುತ್ತಾ ಇಲ್ಲ, ಬೆಳೆ ನಷ್ಟ ರೈತರಿಗೆ, ಎಲ್ಲರಿಗೂ ಸಮಾನವಾಗಿ ಆಗಿದೆ. ಒಬ್ಬರಿಗೆ ಕೊಟ್ಟು ಒಬ್ಬರಿಗೆ ಕೊಡದೇ ಇದ್ದಾಗ ಅವರ ಭಾವನೆಗಳು ಹೇಗಿರುತ್ತವೆ, ಅದಕ್ಕೆ ತಾವು ನಿರ್ದಿಷ್ಟವಾಗಿ ಇಷ್ಟು ದಿವಸದಲ್ಲಿ ಆ ರೈತರ ಆತಂಕವನ್ನು ಪರಿಹಾರಿಸುತ್ತೇವೆ ಎಂದು ತಾವು ಹೇಳುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್: ಅಧ್ಯಕ್ಷರೆ, ಅವರ ಭಾವನೆಗಳನ್ನು ನಾನು ಅರ್ಥಮಾಡಿ ಕೊಂಡಿದ್ದೇನೆ ಇದರ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆ ನಾನು ಸಮಾಲೋಚಿಸಿ ಯಾವ ಹಳ್ಳಿಗಳಲ್ಲಿ ಯಾವ ರೈತರನ್ನು ಬಿಡಲಾಗಿದೆ ಎಲ್ಲಿ ಬೆಳೆ ನಷ್ಟದ ಬಾಬ್ತು ಹಣ ಬಿಡುಗಡೆ ಬಿಟ್ಟು ಹೋಗಿದೆ ಎಂದು ವಿಚಾರ ಮಾಡಿ ಮುಂದಿನ ಕ್ರಮಗಳನ್ನು ನಾನು ಕೈಗೊಳ್ಳುತ್ತೇನೆ.

ಶ್ರೀ ಬಿ. ಶಿವರಾಂ: ಈಗಾಗಲೇ ಅರ್ಜಿ ಬಂದಿದೆ. ಮತ್ತೆ ಏನು ವರದಿ ಕೇಳುವುದು ಉಳಿದಿದೆ. ಹಣದ ಬಗ್ಗೆ ತಾವು ನಿಖರವಾಗಿ ಹೇಳಲಿಲ್ಲ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಅಧ್ಯಕ್ಷರೆ, ದಿನಾಂಕ: 27–3–2006ರ 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 59 ಪ್ರಶ್ನೆಗಳ ಪೈಕಿ 53 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ–1

ಅಧ್ಯಕ್ಷರು: ಮಂಡಿಸಲಾಯಿತು.

2. ಅಧ್ಯಕ್ಷರ ತೀರ್ಪು

ಅಧ್ಯಕ್ಷರು: ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ನಡವಳಿಕೆಗಳ ನಿಯಮ 92ರ ಮೇರೆಗೆ ಹಕ್ಕುಚ್ಯುತಿ ಪ್ರಶ್ನೆ ಸೂಚನೆಯನ್ನು ದಿನದ ಉಪವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಕಛೇರಿಯಲ್ಲಿ ನೀಡಬೇಕಾಗುತ್ತದೆ. ಆದರೆ ತಾವು ಸೂಚನೆ ನೀಡಿರುವುದು ಈಗ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ. ಅದಲ್ಲದೆ ಹಕ್ಕುಚ್ಯುತಿ ಪ್ರಸ್ತಾವ ಈ ಮನೆಯ ಸದಸ್ಯರ ವಿರುದ್ಧ ಇರುವುದರಿಂದ ಅವರಿಗೂ ಸೂಚನೆ ಪ್ರತಿಯೊಂದನ್ನು ಕಳುಹಿಸಿಕೊಡಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ನಾಳೆ ಪ್ರಸ್ತಾಪಿಸಲು ಅವಕಾಶ ಕೊಡಲಾಗುವುದು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಪೀಠದ ಸಲುವಾಗಿ ನಿರಶನೆ.

ಶ್ರೀ ಧರಂ ಸಿಂಗ್ (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೆ, ಈಗಾಗಲೇ ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋಟ್ ಪೀಠದ ಸಲುವಾಗಿ ಎಲ್ಲಾ ವಕೀಲರೂ ಕೂಡ ಬಹಿಷ್ಕಾರ ಮಾಡಿದ್ದಾರೆ. ಬಿ.ಜಿ. ಹಿರೇಮಠರೂ ಕೂಡ ನಿರಶನ ಪ್ರಾರಂಭ ಮಾಡಿದ್ದಾರೆ. ನಿನ್ನೆ ಜಗದೀಶ್ ಶೆಟ್ಟರ್ ಕೂಡ ಆ ಸ್ಥಳಕ್ಕೆ ಹೋಗಿ ಅವರನ್ನು ವಿಚಾರಿಸಿದ್ದಾರೆ. ಮಾನ್ಯ ಹೊರಟ್ಟಿಯವರೂ ಕೂಡ ಹೋಗಿದ್ದಾರೆ. 50 ವರ್ಷದ ನಂತರ ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಆಗಬೇಕು. ಶ್ರೀ ಜಗದೀಶ್ ಶೆಟ್ಟರ್ ಕೂಡ ಆಗಿನ ಮುಖ್ಯಮಂತ್ರಿಗಳ ಜೊತೆ ವಾಜಪೇಯಿಯವರೊಡನೆ ಮಾತನಾಡಿ ಬಂದರು. ಎಲ್ಲರೂ ಮಾತನಾಡಿದರೂ ಈ ಸಮಸ್ಯೆ ಇತ್ಯರ್ಥ ಆಗಿರಲಿಲ್ಲ. 2004ರಲ್ಲಿ ನಾವೆಲ್ಲರೂ ವಿಚಾರ ವಿಮರ್ಶೆ ಮಾಡಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಭೇಟಿ ಆಗಿದ್ದೇವು. ಅವರ ಮನವೊಲಿಸಲು ಪ್ರಯತ್ನ ಮಾಡಿದ್ದೇವೆ. ಪರ್ಟಿಕಿಲರಾಗಿ ಇಲ್ಲಿದ್ದ ಯಡಿಯೂರಪ್ಪನವರು ಹಾಗೂ ಜಗದೀಶ್ ಶೆಟ್ಟರ್‌ರವರು ಎಂದು ಬರುತ್ತದೆ ಹೈಕೋರ್ಟ್ ಉತ್ತರ ಕರ್ನಾಟಕಕ್ಕೆ ಎಂದು ಕೇಳುತ್ತಿದ್ದರು. ಆಗಿನ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಜೈನ್‌ರವರ ಮನವೊಲಿಸಿ ಕೊನೆಗೆ ಗುಲ್ಬರ್ಗ, ಧಾರವಾಡಗಳಲ್ಲಿ ಶಂಕುಸ್ಥಾಪನೆ ಮಾಡಿದೆವು. ರಾಜ್ಯಪಾಲರು ಬಂದರು, ಮುಖ್ಯ ನ್ಯಾಯಮೂರ್ತಿಗಳು ಬಂದರು, ಜಗದೀಶ್ ಶೆಟ್ಟರ್ ರವರೂ ಕೂಡ ಇದ್ದರು. ಆಗಿನ ಉಪ ಮುಖ್ಯಮಂತ್ರಿ ಶ್ರೀ ಪ್ರಕಾಶ್‌ರವರೂ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದೇ ರೀತಿ ಗುಲ್ಬರ್ಗದಲ್ಲೂ ಪ್ರಾರಂಭ ಆಯಿತು. ನಾನು